ಎಂ.ವಿ.ಸಿ - 852/2025
ಪಿ.ಡಬ್ಲ್ಯು - 01

**ದಿನಾಂಕ : 17-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ವಾಹನಕ್ಕೆ Total damages ಆಗಿಲ್ಲ ಎಂದರೆ ಸರಿಯಲ್ಲ. ಐಎಂವಿ ವರದಿಯಲ್ಲಿ RTO ಯಾಂತ್ರಿಕ ಪರೀಕ್ಷಕರು ಕಾಣಿಸಿರುವ Damage ಗಳಿಗೂ ನಮ್ಮ ಅರ್ಜಿ ಮತ್ತು ಸರ್ವೆಯರ್ ರವರು ಕಾಣಿಸಿರುವ ಡ್ಯಾಮೇಜ್ ಗಳಿಗೂ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳು ನಾನೇ ತಯಾರು ಮಾಡಿ ಹಾಕಿರುವ ಬಿಲ್ಲುಗಳು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವಂತಹ ಖರ್ಚು ವೆಚ್ಚಗಳು ನನಗೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆಯರ್ ರವನ್ನು ನ್ಯಾಯಲಯದಲ್ಲಿ ವಿಚಾರಣೆ ಮಾಡುತ್ತೇನೆ . ಸರ್ವೆ ವರದಿಗಳು ಮತ್ತು ಇತರೇ ದಾಖಲೆಗಳು ನಾನೇ ಸೃಷ್ಟಿ ಮಾಡಿ ಹಾಜರುಪಡಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನಮ್ಮ ವಾಹನ ರಸ್ತೆಗೆ ಬಿದ್ದು ಡ್ಯಾಮೇಜ್ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಮಧ್ಯ ರಾತ್ರಿ 12.30 ಕ್ಕೆ ಆಗಿದೆ ಎಂದರೆ ಸರಿ . ಆ ಕಾರಣದಿಂದ ನನ್ನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಾನು ಆ ದಿನ ಮನೆಗೆ ಹೋಗುತಿದ್ದೆ . ನಮ್ಮ ಮನೆ ಪೇತ್ರಿಯಲ್ಲಿ ಇರುತ್ತದೆ . ಅಪಘಾತ ನನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಎಂ.ವಿ.ಸಿ - 852/2025
ಪಿ.ಡಬ್ಲ್ಯು - 01

ಪ್ರ. ಹಿ. ಸಿ. ನ್ಯಾ ಉಡುಪಿ.